ಅವನನ್ನು ಹುಡುಕಿದ.

ದಾರಿಹೋಕ ಹೇಳಿದ ಕಾಶಿಪಟ್ಟಣದ ಆ ಜಾಗಗಳನ್ನೆಲ್ಲಾ ರಾಮ ನೋಡಿದ. ಗಂಗಾನದಿಯ ದಡದಲ್ಲಿ ಸಾಲಾಗಿ ಹೆಣಗಳನ್ನು ಸುಡುವುದನ್ನು ನೋಡಿ ಬೆಚ್ಚಿದ. ಗಂಗೆಯಲ್ಲಿ ಮುಳುಗುತ್ತಿದ್ದ ಭಕ್ತರನ್ನು, ಯಾತ್ರಿಕರನ್ನು ನೋಡಿ, ಹೇಗಪ್ಪ ಈ ಮಲಿನಗೊಂಡ ನೀರಿನಲ್ಲಿ ಮುಳುಗುವುದು ಎಂದುಕೊಂಡೇ ತಾನೂ ಮೂರು ಸಲ ಮುಳುಗಿ ಎದ್ದಾಗ, ಎದುರಿಗೆ ದೂರದಲ್ಲಿ ದಾರಿಯಲ್ಲಿ ತನ್ನ ಜೊತೆಯಲ್ಲಿ ಬಂದ ಆ ವ್ಯಕ್ತಿ ನೀರಿನಲ್ಲಿ ಮುಳುಗಿ ಏಳುತ್ತಿರುವಂತೆ ಕಂಡಿತು. ಮತ್ತೊಂದು ಕ್ಷಣದಲ್ಲಿ ಅವನ ಕಣ್ಣಿಂದ ಆತ ಮಾಯವಾಗಿದ್ದ. ರಾಮನಿಗೆ ಆಗಲೂ ಅವನು ತನ್ನ ಮಗನೇ ಇರಬೇಕು ಅನ್ನಿಸಿತು!

ರಾಮ ಮಡಿಯಾದ ಮೇಲೆ ವಿಶ್ವನಾಥನ ದರ್ಶನಕ್ಕೆ ಹೊರಟ. ವಿಶ್ವನಾಥನ ಶಿವಲಿಂಗವನ್ನು ಭಕ್ತರು ಮುಗಿಬಿದ್ದು ಕೈಯಿಂದ ಮುಟ್ಟುತ್ತಿರುವುದನ್ನು ನೋಡಿ, ತಾನೂ ಮುಟ್ಟಲು ಆ ಸರತಿ ಸಾಲಿನಲ್ಲಿ ಹೋಗಿ ನಿಂತ. ದೂರದಲ್ಲಿ ಆಗಲೇ ಸರತಿ ಸಾಲಿನಲ್ಲಿ ಗೆಳೆಯ ಶಿವ ನಿಂತು ಶಿವಲಿಂಗವನ್ನು ಮುಟ್ಟಿ ಹೋಗುತ್ತಿರುವಂತೆ ರಾಮನಿಗೆ ಭಾಸವಾಯಿತು! ರಾಮ ತನ್ನ ಸರದಿ ಬಂದು ಶಿವಲಿಂಗ ಮುಟ್ಟಲು ಹೋದಾಗ ಅದು ತನ್ನ ಕೈಗೆ ಸಿಕ್ಕಿತು ಅನ್ನುವಷ್ಟರಲ್ಲಿ ಜನ ಅವನನ್ನು ಹಿಂದಿನಿಂದ ಮುಂದಕ್ಕೆ ತಳ್ಳಿದ್ದರು. ಅಲ್ಲಿ ಅದನ್ನು ಮುಟ್ಟಿ ಮುಂದಕ್ಕೆ ಹೋಗುವುದು ಒಂದು ಕ್ಷಣ ತಡವಾದ್ದರಿಂದ ಸರತಿ ಸಾಲಿನಲ್ಲಿ ಹಿಂದೆ ಇದ್ದ ಜನ ನೂಕಿದ್ದರು. ಕೊನೆಗೂ ರಾಮನಿಗೆ ಶಿವಲಿಂಗವನ್ನು ಮುಟ್ಟಲಾಗಲಿಲ್ಲ. ತನಗಿಂತ ಮೊದಲೇ ಶಿವ ಅದನ್ನು ಮುಟ್ಟಿ ಹೋದಂತೆ ಕಂಡನಲ್ಲ ಎಂದುಕೊಂಡ! ಕಾಶಿ ವಿಶ್ವನಾಥನ ಮುಂದೆ ಬಂದು ಹುಂಡಿಯಲ್ಲಿ ಹರಕೆ ಸಲ್ಲಿಸಿ ಕೈ ಮುಗಿದು ಸರತಿ ಸಾಲಿನ ಒಂದು ಬದಿಯಲ್ಲಿ ನಿಂತನು. ಅಷ್ಟರಲ್ಲಿ ಆ ಬದಿಯಲ್ಲಿ ಸರತಿ ಸಾಲಿನಲ್ಲಿ ಮುಂದೆ ಆಗಲೇ ಶಿವ ನಿಂತು ಹರಕೆ, ಪ್ರಾರ್ಥನೆ ಸಲ್ಲಿಸಿ ಅತ್ತ ಜನಗಳ ಮಧ್ಯೆ ನಡೆದು ಹೋದಂತೆ ರಾಮನಿಗೆ ಕಂಡಂತಾಯಿತು! 'ಆದರೂ ನನಗಿಂತ ಶಿವ ಇಷ್ಟು ಬೇಗ ಬರುವುದಕ್ಕೆ ಸಾಧ್ಯವಿಲ್ಲ. ಇರಲಿ' ಎಂದುಕೊಂಡು, 'ಅವನಿಗೆ ಯಾರೋ ದಾರಿ ತೋರುವವರು ಸಿಕ್ಕಿರಬಹುದು. ಅದಕ್ಕೇ ಶಿವ ನನಗಿಂತ ಮುಂಚೆಯೇ ಬಂದು, ಸೇವೆ ಸಲ್ಲಿಸಿ ಮುಂದೆ ಹೋಗುತ್ತಿರಬೇಕು. ಮೊದಲು ಅವನನ್ನು ಹಿಡಿಯಬೇಕು' ಎಂದುಕೊಂಡನು.

ಮಾರನೆಯ ದಿನ ರಾಮ ಕಾಲಭೈರವೇಶ್ವರನ ಗುಡಿಗೆ ಹೋದನು. ಅಲ್ಲಿ ತನಗಿಂತ ಮೊದಲೇ ಶಿವ ಬಲಭಾಗದ ಕಾಲಭೈರವೇಶ್ವರನ ಸಮೀಪವೇ ನಿಂತಿದ್ದಂತೆ ರಾಮನಿಗೆ ಗೋಚರವಾಯಿತು. ಅಲ್ಲಿ ಅವನ ಬೋಳು ತಲೆ ಕೈಎಣ್ಣೆ ಹಾಕಿ ಉಜ್ಜಿದಂತೆ ಥಳ ಥಳ ಹೊಳೆಯುತ್ತಿದ್ದದ್ದನ್ನು ನೋಡಿದ. 'ಒಳ್ಳೆಯದೇ ಆಯ್ತು. ಈಗ ಶಿವನನ್ನು ಹಿಡಿಯಬಹುದು!' ಎಂದುಕೊಳ್ಳುತ್ತಿದ್ದಷ್ಟರಲ್ಲಿ ಶಿವ



ಭಕ್ತರ ಸಂದಣಿಯಿಂದ ಮುಂದೆ ಹೋದಂತಾಯ್ತು. ತಕ್ಷಣ ರಾಮ ಬಾಗಿಲ ಕಡೆ ನಡೆದನು. 'ಇನ್ನು ಶಿವ ನನ್ನಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಅವನು ಹೇಗೆ ನನ್ನ ಕೈಯಿಂದ ಇನ್ನು ತಪ್ಪಿಸಿಕೊಳ್ಳುತ್ತಾನೆ ನೋಡುತ್ತೇನೆ!' ಎಂದುಕೊಳ್ಳುತ್ತಾ ಬಾಗಿಲ ಬಳಿ ಕಾಯುತ್ತಾ ನಿಂತನು. ಎಷ್ಟೊತ್ತಾದರೂ ಶಿವ ಮಾತ್ರ ಹೊರಗೆ ಬರಲೇ ಇಲ್ಲ. ದರ್ಶನಕ್ಕೆ ಬಂದಿದ್ದ ಭಕ್ತರೆಲ್ಲಾ ಆಗಲೇ ಹೊರಗೆ ಹೋಗಿದ್ದರು. ಮಧ್ಯಾಹ್ನವಾಗುತ್ತಿತ್ತು. ಗುಡಿಯೆಲ್ಲಾ ಖಾಲಿಯಾಗುತ್ತಿತ್ತು. ಪೂಜಾರಿ ಗುಡಿಯ ಬಾಗಿಲು ಹಾಕಿದ. ಶಿವನ ಕಾದು ಕಾದು ಸುಸ್ತಾಗಿದ್ದ ರಾಮ ಬೇಸರಗೊಂಡು ಹೊರಟ.

ಒಟ್ಟಿನಲ್ಲಿ ರಾಮ ಕಾಶಿಯಾತ್ರೆ ಮುಗಿಸಿದ್ದ. ಮನೆಗೆ ಬೇಕಾದ ಗಂಗಾಜಲ, ಪ್ರಸಾದ ಎಲ್ಲವನ್ನೂ